# ಬೇಂದ್ರೆಯವರ ಕಾವ್ಯಗಳಲ್ಲಿ ಮೌನ ಧ್ಯಾನದ ನೆಲೆಗಳು

ಸತ್ಯಮಂಗಲ ಮಹಾದೇವ[1]

Article Link: https://aksharasurya.com/2023/10/satyamangala-mahadev/

## ABSTRACT:

ಬೇಂದ್ರೆಯವರು ತಮ್ಮ ಕಾವ್ಯದಲ್ಲಿ ಒಳನುಡಿಯಾಗಿ ಹಿಡಿಗಾಳಿನಂತೆ ಒಡಮೂಡಿಸಿರುವ ಧ್ಯಾನ ಹಾಗೂ ಮೌನದ ನೆಲೆಗಳನ್ನು ವಿಶ್ಲೇಷಿಸುವುದು. ಗಾಳಿಹೆಜ್ಜೆಯನ್ನು ಧ್ಯಾನಿಸುತ್ತಾ ಅಮೃತಕ್ಕೆ ಹಾರುವ ಗರುಡನಂತೆ ಮೌನದ ಯಾನದ ಜೊತೆಗೆ ಸಾಮಾನ್ಯ ಬದುಕನ್ನು ಅನುಭಾವದ ಎತ್ತರಕ್ಕೆ ಕೊಂಡೊಯ್ಯುವ ಒಲವಿನ ಕಾವ್ಯದ ಮೌನ ಮತ್ತು ಧ್ಯಾನದ ನೆಲೆಗಳನ್ನು ಹುಡುಕುವ ಪ್ರಯತ್ನ ಈ ಲೇಖನದಲ್ಲಿ ಮಾಡಲಾಗಿದೆ.

## KEYWORDS:

ಧ್ಯಾನ, ಮೌನ, ಅನುಭಾವ, ಆಧ್ಯಾತ್ಮಿಕ ಅನುಸಂಧಾನ, ವಿಶ್ವಾತ್ಮಕ ಚಿಂತನೆ.

ಬೇಂದ್ರೆಯವರ ಧ್ಯಾನ ಕಾವ್ಯದ ಒಳನುಡಿಯಾಗಿ ಒಡಮೂಡುವ ಇಡಿಗಾಳು. ಹಣ್ಣಾಗಿ ಹೂವು ಮಕರಂದವನ್ನು ಅಡಗಿಸಿಕೊಂಡ ಔದುಂಬರದಂತೆ ಅವರ ಮೌನದ ನೆಲೆ. ಬೇಂದ್ರೆಯವರಿಗೆ ಧ್ಯಾನವು ಅಮೃತಕ್ಕೆ ಹಾರುವ ಗರುಡನಂತೆ ಗಮ್ಯ ಮತ್ತು ಗಹನವಾದದ್ದು. ಅವರಿಗೆ ಮೌನ ಗಿಡಗೆಂಟೆಗಳ ಕೊರಳಲ್ಲಿ ಹಕ್ಕಿಗಳ ಹಾಡನ್ನು ಕಾಣುವ ಒಂದು ಸಾಧನ. ಗಾಳಿಯ ಹೆಜ್ಜೆಗಳು ಹಿಡಿದ ಸುಗಂಧದ ಪರಿಮಳವನ್ನು ಅನುಭವಿಸುವ ಯಾನದಲ್ಲಿ, ಉತ್ತರ ದ್ರುವದಿಂ ದಕ್ಷಿಣದ್ರುವಕೂ ಚುಂಬಕ ಗಾಳಿಯು ಬೀಸುವುದನ್ನು ಕಾಣುವ ಮೌನದ ನೆಲೆ ಅವರದು. ಅಂತರಂಗದ ದರ್ಶನವನ್ನು ಶಬ್ಧಗಳಲ್ಲಿ ಧ್ಯಾನದಂತೆ ಹಿಡಿದಿಡುವಲ್ಲಿ ಅವರ ಧ್ಯಾನವಿದೆ. ಅನುಭವದ ನಾಡಿಮಿಡಿತವನ್ನು ಹಿಡಿದು ಪದಗಳ ನುಡಿಸುವ ಮಾಂತ್ರಿಕತೆಯನ್ನು ಸಾಧಿಸುವಲ್ಲಿ ಧ್ಯಾನ ಅರಳುತ್ತದೆ. ಹತ್ತು ತಲೆಗಳನ್ನು ಹೊತ್ತ ರಾವಣ ಕುಣಿದಾಗ ಆಗುವ ಅನುಭವದಲ್ಲಿ ಶ್ರಾವಣವನ್ನು ದರ್ಶನಮಾಡಿಸುತ್ತಾ, 'ಆತಕೊಟ್ಟ ವಡೆವೆ ವಸ್ತು ನನಗೂ ಅವಗೂ ಗೊತ್ತು' ಎನ್ನುವ ಒಲವಿನ ಒಳಮನಸ್ಸಿನ ಭಾವಕೋಶವನ್ನು ತಣ್ಣಗೆ ತೆರೆದಿಟ್ಟು ಒಲವನುಣಿಸುವಲ್ಲಿ ಮೌನ ಅಳವಡುತ್ತದೆ. ಪಾತರಗಿತ್ತಿಯ ರೆಕ್ಕೆಗಳಲ್ಲಿ ಹಚ್ಚೆ ಹಾಕಿದ ಸೋಜಿಗವನ್ನು ಓದುಗನಿಗೆ

1. ಮುಖ್ಯಸ್ಥರು, ಕನ್ನಡ ವಿಭಾಗ, ಶೇಷಾದ್ರಿಪುರಂ ಸಂಜೆ ಕಾಲೇಜು, ಬೆಂಗಳೂರು.

ಕಾಣಿಸುವ ಕವಿಸಮಯದಲ್ಲಿ ಯಾರಿಗೂ ಹೇಳದೆ ಮುದ್ದುಮಾಟದ ಕನಸಿನೂ–ರಿಗೆ ಸದ್ದುಮಾಡದೆ ಸಾಗುವಲ್ಲಿ ಮೌನ ತನ್ನ ಅರಹನ್ನು ಹಿಗ್ಗಿಸಿಕೊಳ್ಳುತ್ತದೆ. 'ವಿಶ್ವಮಾತೆಯ ಗರ್ಭದೊಳಗೆ ಕಮಲ ಜಾತ ಪರಾಗ ಪರಮಾಣು ಕೀರ್ತಿಯಾಗಿ' ಅನುಭಾವದ ನೆಲೆಗೆ ತನ್ನ ಆತ್ಮವನ್ನು ಎತ್ತರಿಸಿಕೊಳ್ಳುವ ಕಾವ್ಯಗಳಲ್ಲಿ ಅವರ ಮೌನ ಮತ್ತು ಧ್ಯಾನದ ನೆಲೆಗಳು ಭೂಮಿಯೊಳಗಿನ ಅಂತರ್ಜಲದಂತೆ ಹರಡಿಕೊಳ್ಳುತ್ತವೆ.

ವೇದ, ಉಪನಿಷತ್ತು, ದಾಸಸಾಹಿತ್ಯ, ಶರಣಸಾಹಿತ್ಯ, ಜೈನಸಾಹಿತ್ಯ, ಬೌದ್ಧಸಾಹಿತ್ಯ ಸೇರಿದಂತೆ ಭಾರತೀಯ ತತ್ವಶಾಸ್ತ್ರಗಳ ಅಧ್ಯಯನ, ಜನಪದರ ಆಚರಣೆಗಳು, ಸಾಮಾನ್ಯರ ಬದುಕಿನ ಜೀವನಕ್ರಮದ ಅಧ್ಯಯನಗಳಿಂದ ಪಡೆದ ಅನುಭವದ ಹಿನ್ನೆಲೆಯಲ್ಲಿ ತಮ್ಮ ಕಾವ್ಯವನ್ನು ಮೌನ ಮತ್ತು ಧ್ಯಾನದ ಕಸುವಿನಿಂದ ಪುಷ್ಟಿಗೊಳಿಸಿದ್ದಾರೆ.

**ನೆಲದ ಮರೆಯ ನಿಧಾನದಂತೆ**
**ಫಲದ ಮರೆಯ ರುಚಿಯಂತೆ**
**ಶಿಲೆಯ ಮರೆಯ ಹೇಮದಂತೆ**
**ತಿಲದ ಮರೆಯ ತೈಲದಂತೆ**
**ಮರದ ಮರೆಯ ತೇಜದಂತೆ**
**ಭಾವದ ಮರೆಯ ಬ್ರಹ್ಮವಾಗಿಪ್ಪ**
**ಚೆನ್ನಮಲ್ಲಿಕಾರ್ಜುನನ ನಿಲವನರಿಯಬಾರದು.**

**ಅಕ್ಕಮಹಾದೇವಿ**

ಮೇಲ್ಕಂಡ ವಚನದಲ್ಲಿ ಅಕ್ಕಮಹಾದೇವಿಯವರು ತಾವು ಕಂಡುಕೊಂಡ 'ಬ್ರಹ್ಮವಾಗಿಪ್ಪ ನಿಲುವಿನ' ಕುರಿತು ಧ್ಯಾನಿಸಿದ ಬೇಂದ್ರೆಯವರು ಕಂಡ ದರ್ಶನ ಎಂದು ಮನಗಂಡು 'ಇದು ಬರಿಬೆಳಗಲ್ಲೋ ಅಣ್ಣ ಶಾಂತಿ ರಸವೇ ಪ್ರೀತಿಯಿಂದ ಮೈದೋರಿತ್ತಣ್ಣ' ಎನ್ನುವ ಪ್ರಭಾತ ಮೌನದ, ಪ್ರಶಾಂತ ಸುಖದ, ಧ್ಯಾನಾವಸ್ಥೆಯ ದರ್ಶನವನ್ನು ಬೆಳಗು ಕವಿತೆಯಲ್ಲಿ ಅನಾವರಣಗೊಳಿಸಿದ್ದಾರೆ.

ಧ್ಯಾನ ಎಂದರೆ ಮನಸ್ಸಿನ ಏಕಾಗ್ರತೆ ಎಂಬ ಮಾತೊಂದಿದೆ. ಅದಕ್ಕೆ ಉಪಾಸನೆ ಎಂದೂ ಕೂಡ ಕರೆಯುವುದುಂಟು. ಘನಧ್ಯೇಯದ ಮೇಲೆ ನಿರಂತರವಾದ ಒಂದೇ ಬಗೆಯ ಚಿತ್ತವೃತ್ತಿಯನ್ನು ನೆಲೆಗೊಳಿಸುವುದು ಎಂಬ ಅರ್ಥವೂ ಕೂಡ ಇದೆ.

**ಕಾಲೂರಿತು ಮಳೆ**
**ಕತ್ತೆತ್ತಿತು ಬೆಳೆ**
**ಹನಿಯೊಡೆಯಿತು ಮೋಡ**
**ಕಿಲಿ ಕಿಲಿ ಹಕ್ಕಿ**

**ಕುಲು ಕುಲು ನಕ್ಕಿ**
**ದಯೆಗರೆಯಿತು ನೋಡ**

ಬೇಂದ್ರೆಯವರ ಮನಸ್ಸು ನೆಲಮೂಲ ಸಂಸ್ಕೃತಿಯೊಟ್ಟಿಗಿನ ಅನುಸಂಧಾನದಿಂದ ಪರಿಪಕ್ವಗೊಂಡದ್ದು ಹಾಗಾಗಿ ಮೊಡ ಕಟ್ಟಿ ಮಳೆ ಬರುವುದು ಪ್ರಕೃತಿ ಸಹಜ ಗುಣ. ಸಾಮಾನ್ಯ ಜನರೂ ಹಾಗೆಯೇ ಭಾವಿಸುತ್ತಾರೆ. ಮೊಡ ಕಟ್ಟಿ ಮಳೆ ಬರುವ ಸಂದರ್ಭದಲ್ಲಿ 'ಮಳೆ ಕಾಲೂರಿದೆ' ಎಂದು ರೈತನೊಬ್ಬ ತನ್ನ ಅನುಭವದಿಂದ ಹೇಳುವ ಮಾತು. ಯಾವುದೇ ಕವಿಗೆ ತಾನು ಬದುಕುವ ಪರಿಸರದ ಪ್ರಜ್ಞೆಯು ಇರದೇ ಹೋದರೆ ತನ್ನ ಸುತ್ತಮುತ್ತಲ ಪರಿಸರವನ್ನು ಧ್ಯಾನಿಸದೆ ಹೋದರೆ ಈ ರೀತಿಯ ಹನಿಯೊಡೆಯುವ ಮೋಡದ ಅನುಭವ ಪ್ರಾಪ್ತವಾಗುವುದಿಲ್ಲ.

**ಮಣ್ಣು ನೆಲೆದ ಹೂವೆ ಅಲ್ಲ**
**ಗರ್ವ ದರ್ಪ ಇದಕೆ ಇಲ್ಲ**
**ತೊರೆದಾದಿನ ನಂದನವನ**
**ಭೂ ಬಂಧನ ಪಡೆಯಿತು**

ಬೇಂದ್ರೆಯವರ ಧ್ಯಾನ, ಜಡ ಮತ್ತು ಜೀವಗಳ ನೆಲೆಯ ಆತ್ಯಂತಿಕ ಸತ್ಯವನ್ನು ಕಂಡುಕೊಳ್ಳುವಲ್ಲಿ ಸಾತತ್ಯತೆಯನ್ನು ಪಡೆದುಕೊಳ್ಳುತ್ತದೆ. ಯಾವುದೇ ವ್ಯಕ್ತಿ ಒಂದು ವಸ್ತುವಿನ ಕ್ರಿಯೆಯನ್ನು ಅರ್ಥಮಾಡಿಕೊಳ್ಳಬೇಕಾದರೆ ಆತ ತನ್ನ ಭೌತಿಕ ಪ್ರಪಂಚದ ಒತ್ತಡಗಳ ನಡುವೆಯೂ ಒಂದು ಧ್ಯಾನಸ್ಥ ಮನಸ್ಸನ್ನು ಪಡೆಯದೇ ಹೋದರೆ ಮೇಲ್ಕಂಡ ಕವಿತೆಯ ಸಾಲಿನಲ್ಲಿ ವ್ಯಕ್ತವಾಗಿರುವ ಮಣ್ಣಿನ ಜೀವಕ್ರಿಯೆ ಅರ್ಥವಾಗುವುದೇ ಇಲ್ಲ. ಕೋಟ್ಯಾಂತರ ಜೀವರಾಶಿಗಳಿಗೆ ಆಧಾರವಾಗಿರುವ ಮಣ್ಣಿನ ನಿಸ್ವಾರ್ಥಗುಣವನ್ನು ಕಂಡ ಬೇಂದ್ರೆಯವರು ಮಣ್ಣನ್ನು ಮತ್ತು ಪ್ರಕೃತಿಯ ಕ್ರಿಯೆಯನ್ನು ಧ್ಯಾನಿಸಿದ್ದಾರೆ. 'ಮಣ್ಣು ಭೂ ಬಂಧನ ಪಡೆಯುವ' ಕ್ರಿಯೆ ಪ್ರಕೃತಿಯ ಕುರಿತ ಆಧ್ಯಾತ್ಮಿಕ ನೆಲೆಗಟ್ಟಿನ ಚಿಂತನೆಗಳಾಗಿ ಬೇಂದ್ರೆಯವರ ಕಾವ್ಯದಲ್ಲಿ ಅರಳುಗಟ್ಟಿ ನಿಂತಿವೆ.

**ಬಾಣಂತಿಯೆಲುಬು ಸಾ–**
**ಬಾಣದ ಬಿಳುಪಿನಾ**
**ಕಾಣದ ಕಿರುಗೆಜ್ಜೆ ಕಾಲಾಗ ಇತ್ತೋ**
**ಸಣ್ಣ ಕಂದಮಗಳ**
**ಕಣ್ಣೀನ ಕವಡೀಯ**
**ತಣ್ಣನ್ನ ಜೋಮಾಲೆ ಕೊರಳೊಳಗಿತ್ತೋ**

ಬೇಂದ್ರೆಯವರ ಕಾವ್ಯ ಪ್ರಕೃತಿಯ ಆದಿ ಭೌತಿಕ ನೆಲೆಯನ್ನು ತನ್ನ ಧ್ಯಾನದ ಮೂಲಕ ಕಾಣುವಂತೆ ಲೌಕಿಕದ ವರ್ತಮಾನಗಳನ್ನು ಅಷ್ಟೇ ಆಸ್ಥೆಯಿಂದ

ಧ್ಯಾನಿಸುತ್ತದೆ. ಹಣ ಮನುಷ್ಯನ ಬದುಕಿನ ನಿರ್ವಹಣೆಗೆ ಸಹಕಾರಿಯಾಗಬೇಕೆ ವಿನಃ ಅದು ಮನುಷ್ಯನ ಶೋಷಣೆಗೆ ಕಾರಣವಾಗಬಾರದು ಎಂಬ ಅರಿವನ್ನು ಧ್ಯಾನಿಸಲು ಬೇಂದ್ರೆಯಂತಹ ಕವಿಗೆ ಮಾತ್ರ ಸಾಧ್ಯವಾಗುತ್ತದೆ.

**ತೆರೆಮರೆಗಳನೆತ್ತರಿಸಿ**
**ತೊಡಕುಗಳನು ಕತ್ತರಿಸಿ**
**ಅವನ ಬೆಳಕ ಬಿತ್ತರಿಸಿ**
**ಶಕ್ತಿಯೊಂದು ಬರುವುದು.**
**ದುರ್ಭಾಗ್ಯ ಕವಚದಲಿ ಸೌಭಾಗ್ಯದ ಬೀಜವಿದೆ**
**ಅಜ್ಞಾನದಲ್ಲಿರುವ ಜ್ಞಾನದಂತೆ**

ಮನುಷ್ಯ ಕಷ್ಟಕೋಟಲೆಗಳಿಂದ ಹತಾಷನಾದಾಗ ನಿರಾಶನಾಗಿ ಜೀವನ ಪ್ರೀತಿಯನ್ನು ಕಳೆದುಕೊಳ್ಳುತ್ತಾನೆ. ಆದರೆ ಆಧ್ಯಾತ್ಮಿಕ ಸೂಕ್ಷ್ಮಗಳನ್ನು ಸದಾ ಧ್ಯಾನಿಸುವ ಕವಿಗೆ ಮಾತ್ರ ನಮ್ಮ ಕಷ್ಟಗಳನ್ನು ದೂರಮಾಡುವ ಪ್ರತಿಭೆ ನಮ್ಮೊಳಗೇ ಇದೆ, ಅದು ದುರ್ಭಾಗ್ಯ ಕವಚದಲಿ ಸೌಭಾಗ್ಯದ ಬೀಜವಿದ್ದಂತೆ ಮತ್ತು ಅಜ್ಞಾನದಲ್ಲಿರುವ ಜ್ಞಾನದಂತೆ ಎಂದು ತಿಳಿಯುತ್ತದೆ. ಆತ್ಮ ಮತ್ತು ಪರಮಾತ್ಮನ ನಡುವೆ ಇರುವ ಸಹ ಸಂಬಂಧವನ್ನು ಧ್ಯಾನಿಸಿದಂತಹ ಬೇಂದ್ರೆಯವರ ಧ್ಯಾನಾವಸ್ಥೆಗೆ ಜಡದೊಳಗೂ ಜೀವ ಕಾಣುತ್ತದೆ. 'ಸೌಂದರ್ಯವೆಂಬುದು ಕಣ್ಣಿನ ತುತ್ತಲ್ಲ ಕಣ್ಣಿಗೂ ಕಣ್ಣಾಗಿ ಒಳಗಿಹುದು' ಎಂದು ಹೇಳುವ ಮಾತಲ್ಲಿ ಜಗತ್ತನ್ನು ಆತ್ಮರೂಪದಿಂದ ಚಿಂತಿಸಿದ ಆಧ್ಯಾತ್ಮಿಕ ಎತ್ತರದ ಕವಿ ಬೇಂದ್ರೆಯವರ ಧ್ಯಾನಸ್ಥ ಚೇತನದ ಶಕ್ತಿ ಅಡಗಿದೆ.

ಮೌನ ಎಂದರೆ ಸಾಮಾನ್ಯವಾಗಿ ಮಾತನಾಡದೇ ಇರುವುದು ಎಂಬ ಸಾಮಾನ್ಯ ಅರ್ಥವಿದೆ. ಆದರೆ ಮಾತನಾಡುವುದನ್ನು ಬಿಡುವುದು ಮೌನವಲ್ಲ. ಆತ್ಮನಾದ ಬ್ರಹ್ಮವು ಮಾತಿಗೆ ನಿಲುಕುವುದಿಲ್ಲ ಎಂದು, ಅದರಲ್ಲೇ ನಿಲ್ಲುವುದು ಮೌನ ಎಂದು ಪರಮಾರ್ಥ ಚಿಂತನೆಯಲ್ಲಿ ಹೇಳಿದೆ. ಬೇಂದ್ರೆಯವರು ಎಷ್ಟು ಧ್ಯಾನಸ್ಥ ಚೇತನವೋ ಅಷ್ಟೇ ಮಾತನ್ನು ಅದರ ಅರ್ಥದ ನೆಲೆಯಲ್ಲಿ ನುಡಿಸುವ ಕವಿ ಎಂದೇ ಪ್ರಸಿದ್ಧರಾದವರು. ಧ್ಯಾನಸ್ಥರಾದ ಕವಿ ಬೇಂದ್ರೆಯವರಿಗೆ ಕಂಡ ಭೌತಿಕ ಮತ್ತು ಆದಿಭೌತಿಕ ಜಗತ್ತಿನಲ್ಲಿ ಮೌನದಲ್ಲಿ ಮಾತನಾಡುವ ಜೀವಸೂಕ್ಷ್ಮವನ್ನು ಕಾಣುವ ಮತ್ತು ಕಾಣಿಸುವ ಶಕ್ತಿ ಒಲಿದಿತ್ತು, ಆದ್ದರಿಂದಲೇ ಬೇಂದ್ರೆಯವರ ಕಾವ್ಯವು ಮೌನದಲ್ಲಿ ಅರಳುತ್ತಾ ಧ್ಯಾನದಲ್ಲಿ ಅನವಾರಣಗೊಳ್ಳುತ್ತದೆ.

"ಮಾತು ಮಾತು ಮಥಿಸಿ ಬಂತು ನಾದದ ನವನೀತ, ಹಿಗ್ಗಬೀರಿ ಹಿಗ್ಗಲಿತ್ತು ತನ್ನ ತಾನೇ ಪ್ರೀತ" ನಾದದ ನವನೀತ ಅರ್ಥವಾಗಬೇಕಾದರೆ ಕವಿಗೆ ಶಬ್ದದೊಳಗಿನ ನಿಶ್ಯಬ್ಧವನ್ನು ಅರಿಯುವ ಶಕ್ತಿ ಬೇಕು ಅದು ಮೌನದಿಂದ

ಸಾಧ್ಯವಾಗುತ್ತದೆ. ಆ ಮೌನ ಆತ್ಮದ ಅರಿವಿನ ಚಿಂತನೆಯಿಂದ ಬರುವಂತದ್ದು ಬೇಂದ್ರೆಯವರಂತಹ ಮೌನ ಸಾಧಕರಿಗೆ ಮಾತ್ರ ನಾದದ ನವನೀತವನ್ನು ಸವಿಯುವ ಮತ್ತು ಸವಿಯುವಂತೆ ಮಾಡುವ ದರ್ಶನ ಸಾಧ್ಯವಾಗುತ್ತದೆ.

**ಗಾಳಿ ಕಿರಿಸುಳಿ ಹುಟ್ಟಿತು**
**ತಾನೇ ತುಸ ಕಣ್ಬಿಟ್ಟಿತು**
**ಮೆಲ್ಲೆನೆದೆಯನು ತಟ್ಟಿತು**
**ಅದುವೆ ಆಗಸ ಮುಟ್ಟಿತು**
**ಕಣ್ಣು ಬಣ್ಣವನಿಟ್ಟಿತು**
**ಉಸಿರು ನಡಿಗೆಯ ಕೊಟ್ಟಿತು**
**ನೆವಕೆ ನುಡಿಯನುಟ್ಟಿತು**
**ಕವನ ವೇಷವ ತೊಟ್ಟಿತು**

ಒಂದು ಕವಿತೆ ಹುಟ್ಟುವಾಗ ಕವಿಯ ಮನಸ್ಸು ಏನನ್ನು ಗ್ರಹಿಸಬೇಕು, ಕವಿಯ ಭಾವ ಯಾವ ಅನುಭವದಿಂದ ಪ್ರಫುಲ್ಲವಾಗಬೇಕು ಎನ್ನುವ ಔಚಿತ್ಯವನ್ನು ಈ ಕವಿತೆ ತೆರೆದಿಡುತ್ತದೆ. ಕವಿ ಮೌನಿಯಾದಾಗ ಮಾತ್ರ ಸಂಭವಿಸಬಹುದಾದ ಕಾವ್ಯಾನುಭವವನ್ನು ಬೇಂದ್ರೆ ಮೇಲ್ಕಂಡ ಕವಿತೆಯಲ್ಲಿ ಕಟ್ಟಿಕೊಟಿದ್ದಾರೆ. ಒಂದು ಗಾಳಿಯ ಕಿರಿಸುಳಿ ತಾನೇ ಕಣ್ಬಿಟ್ಟು, ಆಗಸಮುಟ್ಟಿ, ಕಣ್ಣಿನಿಂದ ಬಣ್ಣವನ್ನು ತೊಟ್ಟು, ಉಸಿರಿನಿಂದ ನಡಿಗೆಯ ಪಡೆದುಕೊಂಡಿತು ಎಂದು ಹೇಳುವ ಬೇಂದ್ರೆಯವರು ನುಡಿಯನ್ನು ನೆಪಮಾತ್ರಕ್ಕೆ ತೊಡುವ ಕವನ, ವೇಷವನ್ನು ತೊಡುವ ಒಂದು ಭಾವಕ್ರಿಯೆಯನ್ನು ತಮ್ಮ ಮೌನಸಾಧನೆಯಿಂದ ಸಾಧಿಸಿದ್ದು ಇಲ್ಲಿ ಅನಾವರಣಗೊಂಡಿದೆ. ಹೊರಗಣ್ಣು ಮುಚ್ಚಿದರೆ ಒಳಗಣ್ಣು ತೆರೆಯುತ್ತದೆ ಎನ್ನುವ ಮಾತಿದೆ. ಒಳಗಣ್ಣಿನ ಮೂಲಕ ಒಂದು ಕ್ರಿಯೆಯನ್ನು ಗಮನಿಸುವ ನಿಧಾನ ಪ್ರಾಪ್ತವಾಗುವುದು ಮೌನದಿಂದ. ಒಂದು ಕವಿತೆಯ ಜನನವೂ ಕವಿಯ ಮೌನದಿಂದ ಎಂದು ಬೇಂದ್ರೆ ತಮ್ಮ ಕಾವ್ಯದಲ್ಲಿ ನಿರೂಪಿಸಿದ್ದಾರೆ.

**ಮೌನದಲ್ಲಿಯು ಕೂಡ ಮಾತಿನ ಧ್ವನಿಯಿರಲಿ**
**ಮೂಕ ಮೌನವು ಒಂದು ಶಾಪದೊಲು**
**ತಾಪವ ಕೊಡುವುದು, ತಾ ಪರಿಹರಿಸದು**
**ಜೀವಯಾತನೆಯನ್ನು ಅದು ಎಂದಿಗೂ**

ಬೇಂದ್ರೆಯವರ ಕಾವ್ಯದಲ್ಲಿ ಮೌನವು ಒಂದು ಕ್ರಿಯೆಯನ್ನು ಗ್ರಹಿಸಿ ಭಾವಪರವಶವಾಗುವಂತೆ ಮಾಡುವ ಕವಿಯ ಕಾವ್ಯರಚನೆಗೆ ಸಾಧುವಾಗುವ ಮೌನವನ್ನು ಹೇಳುತ್ತಲೇ ಕುಟುಂಬಕ್ಕೆ ಎರಡು ಕಣ್ಣುಗಳಂತಿರುವ ಪತಿ–ಪತ್ನಿಯರಲ್ಲಿ ಸರಸ ಮತ್ತು ವಿರಸ ಸಾಮಾನ್ಯವಾಗಿರುತ್ತದೆ ಆದರೆ ಕೆಲವು ಬಾರಿ ವಿರಸದಿಂದ

ಉಂಟಾಗುವ ಮೌನದಲ್ಲಿ ಮಾತಿನ ಧ್ವನಿಯಿರಬೇಕು ಎಂದು ಬೇಂದ್ರೆಯವರು ಹೇಳಿದ್ದಾರೆ. ಮೌನದಲ್ಲಿಯೂ ಮಾತನಾಡಬಲ್ಲ ಕ್ರಿಯೆ ಸಾಧ್ಯವಾದಾಗ ಮನುಷ್ಯ ಜೀವಯಾತನೆಯನ್ನು ಅನುಭವಿಸುವುದಿಲ್ಲ, ಪತಿ ಪತ್ನಿಯರು ಜೀವಕ್ರಿಯೆಯ ಉತ್ಸಾಹದ ಗಹನತೆಯನ್ನು ಅರ್ಥಮಾಡಿಕೊಂಡಾಗ ಮಾತ್ರ ಮೌನದಲ್ಲಿಯೂ ಮಾತನಾಡುವ ಕ್ರಿಯೆಯ ಸ್ವರೂಪವನ್ನು ಅವರು ಸಾಧಿಸುತ್ತಾರೆ. ಆಗ ಮೌನದಲ್ಲಿಯೂ ಮಾತನಾಡುವ ಕ್ರಿಯೆ ದಾಂಪತ್ಯದ ಸಾತತ್ಯತೆಗೆ ಸಾಧ್ಯವಾಗುತ್ತದೆ. ಮಾತು ಮತ್ತು ಮೌನ ಬೇರೆಬೇರೆಯಲ್ಲ ಮಾತಿನ ಆಕಾರವನ್ನು ಮೌನದ ನಿರಾಕಾರವನ್ನು ಹಿಡಿದಿಟ್ಟಿರುವುದನ್ನು ತಿಳಿಯುವುದು ಬೇಂದ್ರೆಯವರ ಕಾವ್ಯದ ಅಧ್ಯಯನದಿಂದ ಸಾಧ್ಯವಾಗುತ್ತದೆ.

ಬೇಂದ್ರೆಯವರು ಧಾರವಾಡದಲ್ಲಿ ನ್ಯಾಯವಾದಿಯಾಗಿದ್ದ ನರಸಿಂಗರಾವ್ ದೀಕ್ಷಿತರ ಮನೆಯಲ್ಲಿ 1948 ರಲ್ಲಿ 21 ಮೇ ರಿಂದ 27 ಮೇ ವರೆಗೆ ವಿ.ಕೃ ಗೋಕಾಕ್, ರಂ.ಶ್ರೀ ಮುಗಳಿ ಅವರೊಂದಿಗೆ ಮೌನವಾರ ಆಚ–ರಿಸಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಮೌನದ ಕುರಿತು ಬೇಂದ್ರೆಯವರು 'ನಮ್ಮ ಮೌನ ಸಪ್ತಾಹ' ಎಂಬ ಲೇಖನದಲ್ಲಿ "ಮೌನವು ಮಾತಿನ ತಪ್ಪಸ್ಸು: ಮೊದಲ ಮೆಟ್ಟಿಲು. ಎರಡನೆಯ ಮೆಟ್ಟಿಲಲ್ಲಿ ಅದು ಮೌನ ಅವಸ್ಥಾ ಶಿಖರ, ನಿಜವಾದ ಉತ್ತಮ ಮೌನವು ಮನದ ಗೌರಿಶಂಕರ ದವಲಗಿರಿ" ಎನ್ನುತ್ತಾರೆ. ಬೇಂದ್ರೆಯವರ ಕಾವ್ಯದಲ್ಲಿ ಮೌನವು ಗೌರೀಶಂಕರದಲ್ಲಿ ನೆಲೆನಿಂತಂತೆ ಧ್ಯಾನವು ಔದುಂಭರದಲ್ಲಿ ವಿಕಸಿತವಾಗುವುದನ್ನು ಕಾಣಬಹುದಾಗಿದೆ.

**ಪರಾಮರ್ಶನ ಗ್ರಂಥಗಳು:**

1. ತಿಪ್ಪೇರುದ್ರಸ್ವಾಮಿ ಎಚ್., ಶರಣರ ಅನುಭಾವ ಸಾಹಿತ್ಯ (2010), ಡಿವಿಕೆ ಮೂರ್ತಿ ಪ್ರಕಾಶನ, ಬೆಂಗಳೂರು.
2. ಕೃಷ್ಣಪ್ಪ ಜಿ., ಹೂತಾದ ಹುಣಸಿ, ದ.ರಾ. ಬೇಂದ್ರೆ ಕಾವ್ಯ ವಿಮರ್ಶೆ (2000), ಶ್ರೀರಂಗ ಪ್ರಕಾಶನ, ಮೈಸೂರು.
3. ನಾಗರಾಜ್ ಡಿ. ಆರ್., ಅಲ್ಲಮ ಮತ್ತು ಶೈವ ಪ್ರತಿಭೆ (2006), ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ಶಿವಮೊಗ್ಗ.
4. ರಾನಡೆ ಆರ್. ಡಿ., ಕನ್ನಡ ಸಂತರ ಪರಮಾರ್ಥ ಪಥ (1962), ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
5. ರಾಘವೇಂದ್ರ ರಾವ್ ಎಚ್. ಎಸ್., ಹಾಡೆ ಹಾದಿಯ ತೋರಿತು (1995), ಕ್ರೈಸ್ಟ್ ಕಾಲೇಜು ಕನ್ನಡ ಸಂಘ, ಬೆಂಗಳೂರು.
6. ಮಲ್ಲೇಪುರಂ ಜಿ. ವೆಂಕಟೇಶ, ಕೃತಿ ಕಥನ (2016), ಉದಯ ಪ್ರಕಾಶನ, ಬೆಂಗಳೂರು.